**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೆ ಜಿ ಎಫ್**

**ಸಿ.ಸಿ.ನಂಃ 2149/2023**

**ಪಿರ್ಯಾದುದಾರರು** : ಅಭಕಾರಿ ಪೊಲೀಸ್

**--ವಿರುದ್ಧ--**

**ಆರೋಪಿಗಳು** : ಕೆ ಹರೀಶ್ ಬಿನ್ ಕೃಷ್ಣಪ್ಪ
24 ವರ್ಷ,
ವಾಸಃ 3-59-ಬಿ, ಚಿನ್ನಗಾಂಡ್ಲಪಲ್ಲಿ,
ಶಾಂತಿಪುರಂ, ಬೊಯಿನಪಲ್ಲಿ,
ಚಿತ್ತೂರು.

## ದಂ. ಪ್ರ. ಸಂ. ಕಲಂ 313 ರ ರಡಿಯಲ್ಲಿ ಆರೋಪಿಯ ಹೇಳಿಕೆ

**ಪ್ರಶ್ನೆ-1** : ಈ ನ್ಯಾಯಾಲಯದಲ್ಲಿನ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುತ್ತೀರಾ?

**ಆರೋಪಿಯ ಉತ್ತರಃ**

**ಪ್ರಶ್ನೆ-2:** ಪ್ರಾಸಾ-1 ನವೀನ್ ಬಿ ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ದಿಃ 3.2.2023 ರಂದು ಕರ್ನಾಟಕ ವಿಧಾನಸಭಾ ಚುನಾವಣಾ ಪ್ರಯುಕ್ತ ತಾನು, ಚಾಸಾ3, 4 ಮತ್ತು 6 ರವರು ಕ್ಯಾಸಂಬಳ್ಳಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ-6 ರವರಿಗೆ ಬಂದ ಮಾಹಿತಿಯಂತೆ ಕ್ಯಾಸಂಬಳ್ಳಿಯಲ್ಲಿ ಅಕ್ರಮವಾಗಿ ಮದ್ಯ ಸಾಗಾಣೆ ಮಾಡುತ್ತಿರುವ ಬಗ್ಗೆ ಗೊತ್ತಾಗಿರುತ್ತದೆ. ಸದರಿ ಮಾಹಿತಿಯಂತೆ ಚಾಸಾ6 ರವರು ಕ್ಯಾಸಂಬಳ್ಳಿಯಲ್ಲಿ ಇಬ್ಬರು ಪಂಚರನ್ನು ಕೇಳಲಾಗಿ ಅದರಲ್ಲಿ ಚಾಸಾ1 ಮಾತ್ರ ಪಂಚರಾಗಿ ಬರಲು ಒಪ್ಪಿರುತ್ತಾರೆ. ನಂತರ ತಾನು, ಚಾಸಾ1, 3, 4, 6 ರವರು ಕ್ಯಾಸಂಬಳ್ಳಿ ರಸ್ತೆ ಶಾಂತಿಪುರಂ ಮುಖ್ಯ ರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ ಒಬ್ಬ ಆಸಾಮಿಯು ದ್ವಿ ಚಕ್ರ ವಾಹನದಲ್ಲಿ ನೀಲಿ ಬಣ್ಣದ ಮೂಟೆಯನ್ನು ಇಟ್ಟುಕೊಂಡು ಬರುತ್ತಿರುವಾಗ ತಾವೆಲ್ಲರೂ ಅನುಮಾನಗೊಂಡು ದ್ವಿಚಕ್ರ ವಾಹನವನ್ನು ನಿಲ್ಲಿಸಿರುತ್ತೇವೆ. ಸದರಿ ವಾಹನವನ್ನು ಶೋಧನೆ ಮಾಡಲು, ಸಮಾಯವಕಾಶ ಇಲ್ಲದೇ ಇರುವುದರಿಂದ ಅಬಕಾರಿ ಕಾಯಿದೆ ಅಡಿಯಲ್ಲಿ ಕಾರಣವನ್ನು ಬರೆದು ಶೋಧನೆ ಮುಂದುವರೆಸಿರುತ್ತೇವೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ವನ್ನು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

**ಆರೋಪಿಯ ಉತ್ತರಃ**

**ಪ್ರಶ್ನೆ-3:** ಪ್ರಾಸಾ-1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಸದರಿ ಆಸಾಮಿಯ ಡಿಸ್ಕವರಿ ದ್ವಿಚಕ್ರ ವಾಹನ ಸಂಖ್ಯೆಃ ಎಪಿ ಎ ವೈ 4586 ಮೇಲೆ ಇದ್ದ ಮೂಟೆಯನ್ನು ತೆಗೆದು ನೋಡಲಾಗಿ 90 ಮಿಲಿಯ 240 ಹೈವಾರ್ಡ ವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡು ಬಂದಿರುತ್ತದೆ. ಸದರಿ ವಾಹನ ಚಾಲಕನನ್ನು ವಿಚಾರಿಸಿದಾಗ ಆತನು ನನ್ನ ಹೆಸರನ್ನು ಹರೀಶ್ ಬಿನ್ ಕೃಷ್ಣಪ್ಪ, ಚಿನ್ನಗಾನಹಳ್ಳಿ ಎಂದು ತಿಳಿಸಿದ್ದು, ಸದರಿ ವಾಹನ ನೋಂದಣಿ ಸಂ ಎಪಿ ಎವೈ 4586 ಇರುತ್ತದೆ. ಸದರಿ ವಾಹನದಲ್ಲಿದ್ದ ಮದ್ಯದ ವಸ್ತುಗಳ ಪರವಾನಗಿ ಬಗ್ಗೆ ವಿಚಾರಿಸಿದಾಗ ಯಾವುದೇ

ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ಮದ್ಯದ ವಸ್ತುಗಳು ಅಕ್ರಮ ಸಾಗಾಟ ಎಂದು ತಿಳಿದು ಬಂದಿದ್ದರಿಂದ, ಮೇಲ್ಕಂಡ ಮದ್ಯದ ಪ್ಯಾಕ್ ಗಳಿಂದ **30** ಟೆಟ್ರಾ ಪ್ಯಾಕೆಟ್ಗಳನ್ನು ರಾಸಾಯನಿಕ ಪರೀಕ್ಷೆ ಸಲುವಾಗಿ ಬಿಳಿ ಬಟ್ಟೆ ಇಂದ ಸುತ್ತಿ ಸೀಲ್ ಮಾಡಿ, ನನ್ನ ಹಾಗೂ ಚಾಸಾ-**1**, **3** ರವರ ಸಹಿ ಉಳ್ಳ ಚೀಟಿಯನ್ನು ಅಂಟಿಸಿ, ಸ್ಥಳದಲ್ಲಿ ಸಂಜೆ **5.30** ರಿಂದ **6.30** ಗಂಟೆವರೆಗೆ ಪಂಚನಾಮೆ ಮಾಡಿ ಸಹಿಗಳನ್ನು ಮಾಡಿರುತ್ತೇವೆ. ನಂತರ ಮುದ್ದೆ ಮಾಲು ಆರೋಪಿಯೊಂದಿಗೆ ಅಬಕಾರಿ ಠಾಣೆಗೆ ಬಂದು ಚಾಸಾ-**6** ರವರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ನಾನು ತನಿಖಾಧಿಕಾರಿಯವರಿಗೆ ದಿಃ**2.6.2023** ರಂದು ಹೇಳಿಕೆ ನೀಡಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ವನ್ನು ನುಡಿದಿರುತ್ತಾರೆ**,** ಇದಕ್ಕೆ ನೀವೇನು ಹೇಳುತ್ತೀರಿ**?**

**ಆರೋಪಿಯ ಉತ್ತರಃ**

**ಪ್ರಶ್ನೆ-4:** ಪ್ರಾಸಾ-**2** ಸುರೇಶ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ**,** ದಿಃ3.5.2023 ರಂದು ಸಂಜೆ 5.30 ಗಂಟೆ ಸಮಯದಲ್ಲಿ ತಾನು ಅಬಕಾರಿ ಇಲಾಖೆಯ ಜೀಪ್‌ನಲ್ಲಿ ಚಾಲಕನಾಗಿ ಚಾಸಾ-6, 7 ರವರ ಜೊತೆ ಕರ್ತವ್ಯ ಮಾಡುತ್ತಿರುತ್ತೇನೆ. ಒಂದು ದ್ವಿಚಕ್ರ ವಾಹನದಲ್ಲಿ ಕ್ಯಾಸಂಬಳ್ಳಿಯಿಂದ ಶಾಂತಿಪುರಂ ಗ್ರಾಮಕ್ಕೆ ಒಂದು ಚೀಲ ತೆಗೆದುಕೊಂಡು ಹೋಗುತ್ತಿರುವುದನ್ನು ನೋಡಿ ಚಾಸಾ-7 ರವರು ದ್ವಿಚಕ್ರ ವಾಹನವನ್ನು ಅಡ್ಡಗಟ್ಟಿ ನಿಲ್ಲಿಸುವಂತೆ ಹೇಳಿದಾಗ ತಾನೂ ಸಹ ದ್ವಿಚಕ್ರ ವಾಹನವನ್ನು ನಿಲ್ಲಿಸಿರುತ್ತೇನೆ. ಸದರಿ ದ್ವಿಚಕ್ರ ವಾಹನವನ್ನು ಪರಿಶೀಲಿಸಿದಾಗ 25 ಮದ್ಯದ ಪ್ಯಾಕೆಟ್‌ಗಳು ಇರುತ್ತವೆ. ಸದರಿ 25 ಮದ್ಯದ ಪ್ಯಾಕೆಟ್‌ಗಳನ್ನು ವಶಪಡಿಸಿಕೊಂಡು ಚಾಸಾ-4 ರವರು ಚಾಸಾ-7 ರವರು ಹೇಳಿದಂತೆ ನಿಪಿ-1 ರ ಪಂಚನಾಮೆ ಬರೆದಿರುತ್ತಾರೆ. ತಾನು ನಿಪಿ1 ರ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನಿಪಿ1 ರ ಪಂಚನಾಮೆ ಮಾಡುವ ಮೊದಲು ಶೋಧನಾ ವಾರೆಂಟ್, ಮಾದರಿ ನಕಲಿನ ಚೀಟಿ ಮತ್ತು ಲಿಸ್ಟ ಆಫ್ ಅರ್ಟಿಕಲ್ಸ ದಾಖಲೆಗಳನ್ನು ಬರೆದಿರುತ್ತಾರೆ. ತಾನು ಘಟನೆ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ವನ್ನು ನುಡಿದಿರುತ್ತಾರೆ**,** ಇದಕ್ಕೆ ನೀವೇನು ಹೇಳುತ್ತೀರಿ**?**

**ಆರೋಪಿಯ ಉತ್ತರಃ**

**ಪ್ರಶ್ನೆ-6:** ಪ್ರಾಸಾ.3 ಹನುಮಂತ್ ವಾಗ್ಮೊರೆ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ದಿಃ 3.5.2023 ರಂದು ಕರ್ನಾಟಕ ವಿಧಾನಸಭಾ ಚುನಾವಣಾ ಪ್ರಯುಕ್ತ ತಾನು, ಚಾಸಾ2, 4 ಮತ್ತು 6 ರವರು ಕ್ಯಾಸಂಬಳ್ಳಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ-6 ರವರಿಗೆ ಬಂದ ಮಾಹಿತಿಯಂತೆ ಕ್ಯಾಸಂಬಳ್ಳಿಯಲ್ಲಿ ಅಕ್ರಮವಾಗಿ ಮದ್ಯ ಸಾಗಾಣೆ ಮಾಡುತ್ತಿರುವ ಬಗ್ಗೆ ಗೊತ್ತಾಗಿರುತ್ತದೆ. ಸದರಿ ಮಾಹಿತಿಯಂತೆ ಚಾಸಾ-6 ರವರು ಕ್ಯಾಸಂಬಳ್ಳಿಯಲ್ಲಿ ಇಬ್ಬರು ಪಂಚರನ್ನು ಕೇಳಲಾಗಿ ಅದರಲ್ಲಿ ಚಾಸಾ-1 ಮಾತ್ರ ಪಂಚರಾಗಿ ಬರಲು ಒಪ್ಪಿರುತ್ತಾರೆ. ನಂತರ ತಾನು, ಚಾಸಾ1, 2, 4, 6 ರವರು ಕ್ಯಾಸಂಬಳ್ಳಿ ರಸ್ತೆ ಶಾಂತಿಪುರಂ ಮುಖ್ಯ ರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ ಒಬ್ಬ ಆಸಾಮಿಯು ದ್ವಿ ಚಕ್ರ ವಾಹನದಲ್ಲಿ ನೀಲಿ ಬಣ್ಣದ ಮೂಟೆಯನ್ನು ಇಟ್ಟು ಕೊಂಡು ಬರುತ್ತಿರುವಾಗ ತಾವೆಲ್ಲರೂ ಅನುಮಾನಗೊಂಡು ದ್ವಿಚಕ್ರ ವಾಹನವನ್ನು ನಿಲ್ಲಿಸಿರುತ್ತೇವೆ. ಸದರಿ ವಾಹನವನ್ನು ಶೋಧನೆ ಮಾಡಲು, ಸಮಾಯವಕಾಶ ಇಲ್ಲದೇ ಇರುವುದರಿಂದ ಅಬಕಾರಿ ಕಾಯಿದೆ ಅಡಿಯಲ್ಲಿ ಕಾರಣವನ್ನು ಬರೆದು ಶೋಧನೆ

ಮುಂದುವರೆಸಿರುತ್ತೇವೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ವನ್ನು ನುಡಿದಿರುತ್ತಾರೆ**,** ಇದಕ್ಕೆ ನೀವೇನು ಹೇಳುತ್ತೀರಿ**?**

**ಆರೋಪಿಯ ಉತ್ತರಃ**

**ಪ್ರಶ್ನೆ-7:** ಪ್ರಾಸಾ.3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಸದರಿ ಆಸಾಮಿಯ ಡಿಸ್ಕವರಿ ದ್ವಿಚಕ್ರ ವಾಹನ ಸಂಖ್ಯೆಃ ಎಪಿ-03 ಎವೈ- 4586 ಮೇಲೆ ಇದ್ದ ಮೂಟೆಯನ್ನು ತೆಗೆದು ನೋಡಲಾಗಿ 90 ಮಿಲಿಯ 240 ಹೈವಾರ್ಡ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್‌ಗಳು ಇರುವುದು ಕಂಡು ಬಂದಿರುತ್ತದೆ. ಸದರಿ ವಾಹನ ಚಾಲಕನನ್ನು ವಿಚಾರಿಸಿದಾಗ ಆತನು ತನ್ನ ಹೆಸರನ್ನು ಹರೀಶ್ ಬಿನ್ ಕೃಷ್ಣಪ್ಪ, ಚಿನ್ನಗಾನಹಳ್ಳಿ ಎಂದು ತಿಳಿಸಿದ್ದು, ಸದರಿ ವಾಹನ ನೋಂದಣಿ ಸಂಖ್ಯೆಃ ಎಪಿ-03 ಎವೈ-4586 ಇರುತ್ತದೆ. ಸದರಿ ವಾಹನದಲ್ಲಿದ್ದ ಮದ್ಯದ ವಸ್ತುಗಳ ಪರವಾನಗಿ ಬಗ್ಗೆ ವಿಚಾರಿಸಿದಾಗ ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ಮದ್ಯದ ವಸ್ತುಗಳು ಅಕ್ರಮ ಸಾಗಾಟ ಎಂದು ತಿಳಿದು ಬಂದಿದ್ದರಿಂದ, ಮೇಲ್ಕಂಡ ಮದ್ಯದ ಪ್ಯಾಕ್ ಗಳಿಂದ 30 ಟೆಟ್ರಾ ಪ್ಯಾಕೆಟ್ ಗಳನ್ನು ರಾಸಾಯನಿಕ ಪರೀಕ್ಷೆ ಸಲುವಾಗಿ ಬಿಳಿ ಬಟ್ಟೆ ಇಂದ ಸುತ್ತಿ ಸೀಲ್ ಮಾಡಿ, ನನ್ನ ಹಾಗೂ ಚಾಸಾ-1, 2 ರವರ ಸಹಿ ಉಳ್ಳ ಚೀಟಿಯನ್ನು ಅಂಟಿಸಿ, ಸ್ಥಳದಲ್ಲಿ ಸಂಜೆ 5.30 ರಿಂದ 6.30 ಗಂಟೆವರೆಗೆ ಪಂಚನಾಮೆ ಮಾಡಿ ಸಹಿಗಳನ್ನು ಮಾಡಿರುತ್ತೇವೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ವನ್ನು ನುಡಿದಿರುತ್ತಾರೆ**,** ಇದಕ್ಕೆ ನೀವೇನು ಹೇಳುತ್ತೀರಿ**?**

**ಆರೋಪಿಯ ಉತ್ತರಃ**

**ಪ್ರಶ್ನೆ-8:** ಪ್ರಾಸಾ.3 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ನಂತರ ಮುದ್ದೆ ಮಾಲು ಆರೋಪಿಯೊಂದಿಗೆ ಅಬಕಾರಿ ಠಾಣೆಗೆ ಬಂದು ಚಾಸಾ-6 ರವರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ತಾನು ತನಿಖಾಧಿಕಾರಿಯವರಿಗೆ ದಿಃ2.6.2023 ರಂದು ಹೇಳಿಕೆ ನೀಡಿರುತ್ತೇನೆ. ದಿಃ16.5.2023 ರಂದು ಚಾಸಾ-7 ರವರು ಹಾಲಿ ಪ್ರಕರಣದಲ್ಲಿ ವಶಪಡಿಸಿಕೊಂಡ ಮದ್ಯದ ವಸ್ತುಗಳನ್ನು ಪರೀಕ್ಷೆಗಾಗಿ ಕೇಂದ್ರ ರಸಾಯನಿಕ ಪರೀಕ್ಷಾಲಯ, ಅಬಕಾರಿ ಬೆಂಗಳೂರಿಗೆ ಕೊಟ್ಟಿರುತ್ತೇನೆ. ನಂತರ ದಿಃ7.8.2023 ರಂದು ಕೇಂದ್ರ ರಸಾಯನಿಕ ಪರೀಕ್ಷಾಲಯಕ್ಕೆ ಪುನಃ ಹೋಗಿ ವರದಿಯನ್ನು ತಂದು ಚಾಸಾ-7 ರವರಿಗೆ ಕೊಟ್ಟಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯವನ್ನು ನುಡಿದಿರುತ್ತಾರೆ**,** ಇದಕ್ಕೆ ನೀವೇನು ಹೇಳುತ್ತೀರಿ**?**

**ಆರೋಪಿಯ ಉತ್ತರಃ**

**ಪ್ರಶ್ನೆ-9:** ಪ್ರಾಸಾ-5 ಅರುಣ್ ಕುಮಾರ್ (ತನಿಖಾಧಿಕಾರಿ) ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ದಿಃ03.05.2023 ರಂದು ವಿದಾನಸಭಾ ಚುನಾವಣಾ ಪ್ರಯುಕ್ತ ಕ್ಯಾಸಂಬಹಳ್ಳಿ ಗ್ರಾಮದಲ್ಲಿ ಗಸ್ತಿನಲ್ಲಿದ್ದಾಗ ನಮಗೆ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ಬಂದಿದ್ದು ಅದರಂತೆ ಚಾಸಾ1 ರವರನ್ನು ಪಂಚರಾಗಲು ಕೋರಿಕೊಂಡು ಕ್ಯಾಸಂಬಹಳ್ಳಿ ರಸ್ತೆ ಇಂದ ಶಾಂತಿಪುರಂ ಮುಖ್ಯ ರಸ್ತೆಯಲ್ಲಿ ತಾನು ಮತ್ತು ತನ್ನ ಇತರ ಸಿಬ್ಬಂದಿಗಳು ಪಂಚರೊಂದಿಗೆ ಗಸ್ತು ಮಾಡುತ್ತಿದ್ದೆವು. ಆ ಸಮಯದಲ್ಲಿ ಒಂದು ದ್ವಿಚಕ್ರ

ವಾಹನದಲ್ಲಿ ಒಬ್ಬ ಆಸಾಮಿಯು ಬರುತ್ತಿದ್ದು ಆತನಲ್ಲಿ ಒಂದು ನೀಲಿ ಬಣ್ಣದ ಮೂಟೆ ಇದ್ದು ಅದನ್ನು ಕಂಡು ನಾವು ಆತನನ್ನು ತಡೆದು ನಿಲ್ಲಿಸಿರುತ್ತೇವೆ. ನಂತರ ಆತನ ಹೆಸರು, ವಿಳಾಸ ಕೇಳಲಾಗಿ ತನ್ನ ಹೆಸರು ಹರೀಶ್ ಬಿನ್ ಕೃಷ್ಣಪ್ಪ ಎಂದು ಹೇಳಿರುತ್ತಾರೆ. ಸದರಿ ಮೂಟೆಯನ್ನು ಪರಿಶೀಲಿಸುವ ಸಲುವಾಗಿ ಅಲ್ಲಿಯೇ ಶೋದನಾ ವಾರೆಂಟನ್ನು ತಯಾರಿಸಿ ಈ ವಿಚಾರವನ್ನು ಆರೋಪಿಗೆ ತಿಳಿಸಿ ಪಂಚರ ಸಮಕ್ಷಮ ಸದರಿ ನೀಲಿ ಬಣ್ಣದ ಮೂಟೆಯನ್ನು ಪರಿಶೀಲಿಸಿರುತ್ತೇವೆ. ಸದರಿ ಮೂಟೆಯನ್ನು ತೆರೆದು ನೋಡಲಾಗಿ ಅದರಲ್ಲಿ 90 ಮಿಲಿಯ 240 ಹೈವಾರ್ಡ್ ವಿಸ್ಕಿ ಟೆಟ್ರಾ ಪಾಕೇಟುಗಳು ಇದ್ದವು. ಆ ಸಮಯದಲ್ಲಿ ಸದರಿ ಮದ್ಯದ ಸಾಗಾಣಿಕೆಗೆ ಪರವಾನಗಿ ಇದೆಯಾ ಎಂದು ಕೇಳಲಾಗಿ ಆರೋಪಿಯು ಇಲ್ಲ ಎಂದು ತಿಳಿಸಿದ್ದು ನಂತರ ತಾವು ಸದರಿ ಮದ್ಯಗಳ ಪೈಕಿ 30 ಮದ್ಯದ ಟೆಟ್ರಾ ಪಾಕೇಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ, ಬಿಳಿ ಬಟ್ಟೆ ಇಂದ ಸುತ್ತಿ ಸೀಲು ಮಾಡಿರುತ್ತೇವೆ ಎಂದು ನಿಮ್ಮ ವಿರುದ್ದ ಸಾಕ್ಷ್ಯವನ್ನು ನುಡಿದಿರುತ್ತಾರೆ**,** ಇದಕ್ಕೆ ನೀವೇನು ಹೇಳುತ್ತೀರಿ**?**

## ಆರೋಪಿಯ ಉತ್ತರಃ

**ಪ್ರಶ್ನೆ-10:** ಪ್ರಾಸಾ-5 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಆರೋಪಿಯು ಸದರಿ ಮದ್ಯಗಳನ್ನು ಸಾಗಾಣಿಕೆ ಮಾಡಲು ಉಪಯೋಗಿಸಿದ ದ್ವಿಚಕ್ರ ವಾಹನ ಸಂಖ್ಯೆ ಎಪಿ 03 ಎವೈ 4586 ಎಂಬ ವಾಹನವನ್ನು ಸಹ ಅಮಾನತುಪಡಿಸಿಕೊಂಡಿದ್ದು ಸದರಿ ಪ್ರಕ್ರಿಯೆಗಳನ್ನು ಸಂಜೆ 5.30 ರಿಂದ 6.30 ರವರೆಗೆ ಮಹಜರು ಮಾಡಿರುತ್ತೇವೆ. ನಂತರ ತಾವೆಲ್ಲರೂ ಸದರಿ ಮದ್ಯಗಳನ್ನು, ಆರೋಪಿಯನ್ನು, ವಾಹನವನ್ನು ತೆಗೆದುಕೊಂಡು ಠಾಣೆಗೆ ಹಿಂತಿರುಗಿರುತ್ತೇವೆ. ನಂತರ ತಾನು ಈ ಪ್ರಕರಣಕ್ಕೆ ಸಂಬಂದ ಪಟ್ಟಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾದಿಕಾರಿಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ7 ರವರಿಗೆ ಹಸ್ತಾಂತರಿಸಿರುತ್ತೇನೆ. ಆ ದಿನ ನಾವು ಹಿಡಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯು ಅವರೇ ಆಗಿರುತ್ತಾರೆ ಎಂದು ನಿಮ್ಮ ವಿರುದ್ದ ಸಾಕ್ಷ್ಯವನ್ನು ನುಡಿದಿರುತ್ತಾರೆ**,** ಇದಕ್ಕೆ ನೀವೇನು ಹೇಳುತ್ತೀರಿ**?**

## ಆರೋಪಿಯ ಉತ್ತರಃ

**ಪ್ರಶ್ನೆ-11:** ಪ್ರಾಸಾ-4 ರವೀಂದ್ರ ಆರ್ (ತನಿಖಾಧಿಕಾರಿ) ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ದಿಃ16.5.2023 ರಂದು ಹಾಲಿ ಪ್ರಕರಣದ ಕಡತವನ್ನು ಚಾಸ-6 ರವರಿಂದ ಪಡೆದು ತನಿಖೆ ಮಾಡಿರುತ್ತೇನೆ. ಅದೇ ದಿನ ಹಾಲಿ ಪ್ರಕರಣದಲ್ಲಿ ವಶಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಪರೀಕ್ಷೆಗಾಗಿ ಚಾಸಾ-3 ರವರ ಮೂಲಕ ಅಬಕಾರಿ ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ದಿಃ 2.6.23 ರಂದು ಚಾಸಾ-1 ರಿಂದ 4 ರವರನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 20.5.23 ರಂದು ಆರ್ ಟಿ ಒ ಚಿತ್ತೂರು ರವರಿಗೆ ಎಪಿ 03 ಎವೈ 4586 ರ ಬಜಾಜ್ ವಾಹನದ ಬಿ ಎಕ್ಸಟ್ರಾಕ್ಟ ನೀಡಲು ಮನವಿಯನ್ನು ನೀಡಿರುತ್ತೇನೆ. ದಿಃ 30.6.23 ರಂದು ಇ ಮೇಲ್ ಮೂಲಕ ಬಿ ಎಕ್ಸಟ್ರಾಕ್ಟ ಸಹ ಪಡೆದಿರುತ್ತೇನೆ. ದಿಃ 7.8.23 ರಂದು ಹಾಲಿ ಪ್ರಕರಣದಲ್ಲಿ ಕಳುಹಿಸಲಾದ ಮದ್ಯದ ವಸ್ತುಗಳ ವರದಿಯನ್ನು ಅಬಕಾರಿ ಎಫ್ ಎಸ್ ಎಲ್ ನಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ದಿಃ 20.8.23 ರಂದು ಬಜಾಜ್ ವಾಹನದ ಮಾಲೀಕರ ವಿಳಾಸಕ್ಕೆ ಹೋಗಿ ಪತ್ತೆಯಾಗದ ಕಾರಣ ಮಹಜರ್ ಕ್ರಮ ಜರುಗಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ದಿಃ 13.9.23 ರಂದು ಆರೋಪಿಯ ವಿರುದ್ದ ನ್ಯಾಯಾಲಯಕ್ಕೆ

ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ**,** ಇದಕ್ಕೆ ನೀವೇನು ಹೇಳುತ್ತೀರಿ**?**

**ಆರೋಪಿಯ ಉತ್ತರಃ**

**ಪ್ರಶ್ನೆಃ-12** ಹಾಲಿ ಪ್ರಕರಣದ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

**ಆರೋಪಿಯ ಉತ್ತರಃ**

**ಪ್ರಶ್ನೆಃ-13** ಹಾಲಿ ಪ್ರಕರಣದಲ್ಲಿ ನಿಮ್ಮ ಪರವಾಗಿ ಮೌಖಿಕ ಸಾಕ್ಷಿ ಅಥವಾ ದಾಖಲಾತಿ ಸಾಕ್ಷ್ಯವನ್ನು ಹಾಜರುಪಡಿಸುವಿರಾ?

**ಆರೋಪಿಯ ಉತ್ತರಃ**

**(ಮೇಲ್ಕಂಡ ಎಲ್ಲಾ ಪ್ರಶ್ನೆಗಳನ್ನು ಆರೋಪಿಗಳಿಗೆ ಓದಿ ಹೇಳಲಾಗಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ 30.06.2026 ರಂದು ಬೆರಳಚ್ಚುಗಾರ್ತಿಯಿಂದ ಬೆರಳಚ್ಚುಮಾಡಿಸಿರುತ್ತೇನೆ)**

**ಓ.ಹೇ.ಕೇ.ಸರಿ ಇದೆ.**

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ,.
ಕೆ ಜಿ ಎಫ್